**ದಿನಾಂಕ 15.02.2012 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ವಿಧಾನ ಸೌಧ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 7ನೇ ಹಣಕಾಸು ಸಮಿತಿ ಸಭೆಯ ಸಭಾ ನಡುವಳಿಗಳು**

**ಸಭೆಯಲ್ಲಿ ಹಾಜರಿದ್ದ ಸದಸ್ಯರು**

| | | |
|---|---|---|
| 1. ಶ್ರೀ ಕೆ.ಹೆಚ್. ಗೋಪಾಲಕೃಷ್ಣಗೌಡ, ಭಾ.ಆ.ಸೇ<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈ.ಶಿ),<br>ಬೆಂಗಳೂರು | : | ಅಧ್ಯಕ್ಷರು |
| 2. ಶ್ರೀ ಅಶೋಕ್ ಜೀವರ್ಗಿ,<br>ಉಪ ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ, ಬೆಂಗಳೂರು | : | ಸದಸ್ಯರು |
| 3. ಶ್ರೀ ಬಸವರಾಜ್,<br>ನಿರ್ದೇಶಕರು, ಜನಶಕ್ತಿ ಮತ್ತು ಉದ್ಯೋಗ / ಯೋಜನೆ,<br>ಯೋಜನಾ ಇಲಾಖೆ, ಬೆಂಗಳೂರು | : | ಸದಸ್ಯರು |
| 4. ಶ್ರೀ ಸಾಯಿಬಾಬಾ<br>ಸರ್ಕಾರದ ಉಪ ಕಾರ್ಯದರ್ಶಿಗಳು, (ಪ್ರಭಾರಿ)<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈ.ಶಿ),<br>ಬೆಂಗಳೂರು | : | ಸದಸ್ಯರು |
| 5. ಡಾ. ವೆಂಕಟೇಶ್<br>ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ,<br>ಆನಂದರಾವ್ ವೃತ್ತ, ಬೆಂಗಳೂರು | : | ಸದಸ್ಯರು |
| 6. ಡಾ. ರಾಮಯ್ಯ<br>ನಿರ್ದೇಶಕರು,<br>ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,<br>ರಾಯಚೂರು | : | ಸದಸ್ಯರು |

8. ಶ್ರೀ ನಾಗೇಶ್, : ಸದಸ್ಯರು
ಪ್ರಭಾರಿ ಮುಖ್ಯ ಆಡಳಿತಾಧಿಕಾರಿಗಳು,
ರಿಮ್ಸ್, ರಾಯಚೂರು

9. ಡಾ. ಶಿವಾನಂದ, : ವಿಶೇಷ ಆಹ್ವಾನಿತರು
ವೈದ್ಯಕೀಯ ಅಧೀಕ್ಷಕರು,
ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು

10. ಶ್ರೀ ವೆಂಕಟೇಶ್, : ಸದಸ್ಯ ಕಾರ್ಯದರ್ಶಿ
ಆರ್ಥಿಕ ಸಲಹೆಗಾರರು,
ರಿಮ್ಸ್, ರಾಯಚೂರು

ಸಭೆಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಬಿಸಿದರು. ಅಜೆಂಡವಾರು ವಿಷಯಗಳನ್ನು ಚರ್ಚಿಸಲಾಯಿತು.

**ವಿಷಯ ಸೂಚಿ ಸಂಖ್ಯೆ 1 : ದಿನಾಂಕ 05.07.2011 ರಂದು ಜರುಗಿದ ರಿಮ್ಸ್ ಸಂಸ್ಥೆಯ 6ನೇ ಹಣಕಾಸು ಸಭೆ ನಡುವಳಿಗೆ ಅನುಪಾಲನ ವರದಿಯನ್ನು ಓದಿ ದಾಖಲಿಸುವುದು.**

ದಿನಾಂಕ 05.07.2011ರಂದು ಜರುಗಿದ ಆರನೇ ಹಣಕಾಸು ಸಮಿತಿ ಸಭೆಯ ಅನುಪಾಲನಾ ವರದಿಯನ್ನು ಓದಿ ದಾಖಲಿಸಿ ಅನುಮೋದಿಸಲಾಯಿತು.

**ವಿಷಯ ಸೂಚಿ ಸಂಖ್ಯೆ 2 : 150 ವೈದ್ಯಕೀಯ ಸೀಟುಗಳನ್ನು ಹೆಚ್ಚಿಸಲು ಬೇಕಾಗುವ ಬೋಧಕ ಸಿಬ್ಬಂದಿಯ ಹುದ್ದೆಗಳ ಸಂಖ್ಯೆಯನ್ನು ಹೆಚ್ಚಿಸುಲು / ಭರ್ತಿ ಮಾಡಲು ಅನುಮತಿ ನೀಡುವ ಬಗ್ಗೆ.**

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸದ್ಯ 100 ವೈದ್ಯಕೀಯ ಸೀಟುಗಳಿಗೆ ಬೋಧಕ ಸಿಬ್ಬಂದಿಗಳ ಕೊರತೆಯಿರುವುದನ್ನು ಆರ್ಥಿಕ ಸಮಿತಿಯು ಪರಿಶೀಲಿಸಿ ಈಗಾಗಲೇ 150ಕ್ಕೆ ವೈದ್ಯಕೀಯ ಸೀಟುಗಳನ್ನು ಹೆಚ್ಚಿಸದೇ ಸದ್ಯ ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದಂತೆ 100 ವೈದ್ಯಕೀಯ ಸೀಟುಗಳಿಗೆ ಬೇಕಾಗುವ / ಸಂಸ್ಥೆಯಲ್ಲಿ ವಿವಿಧ ವಿಭಾಗಗಳಲ್ಲಿ ಖಾಲಿ ಇರುವ ಹಾಗು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸಲು ಅತಿ ಅವಶ್ಯವಿರುವ ಬೋಧಕ ಸಿಬ್ಬಂದಿ ಹುದ್ದೆಗಳನ್ನು ನಿಯಮಾನುಸಾರ ನೇಮಕ ಮಾಡಿ ಕೊಳ್ಳಲು ಆರ್ಥಿಕ ಸಮಿತಿಯು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚನೆ ನೀಡಿತು.

**ವಿಷಯ ಸೂಚಿ ಸಂಖ್ಯೆ 3 : ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ದಿನಾಂಕ 01.04.2011ರಿಂದ ಜಾರಿಯಾಗಿರುವ ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿ ಹಾಗು ವ್ಯತ್ಯಾಸದ ಮೊತ್ತವನ್ನು (Arrears) ಪಾವತಿಸಲು ಅನುಮತಿ ನೀಡುವ ಬಗ್ಗೆ.**

ಸರ್ಕಾರಿ ಆದೇಶ ಸಂಖ್ಯೆ ಆಕುಕ / 4/ಎಂಎಂಸಿ / 2010 ಬೆಂಗಳೂರು ದಿನಾಂಕ 16.12.2011ರನ್ವಯ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ದಿನಾಂಕ 01.04.2011ರಿಂದ ಅನ್ವಯವಾಗುವಂತೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ ಪರಿಷ್ಕೃತ ವೇತನ ಶ್ರೇಣಿಗಳನ್ನು ನಿಯಮಾನುಸಾರ ವಿವಿಧ ಹುದ್ದೆಗಳಿಗೆ ನಿಗದಿಪಡಿಸಿರುವ ಈ ಕೆಳಗಿನ ಶ್ರೇಣಿಗಳನ್ವಯ ಒಟ್ಟು ರೂ. 3,23,00,000/- ಗಳನ್ನು ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ಪಾವತಿಸಲು ಆರ್ಥಿಕ ಸಮಿತಿ ಸರ್ವಾನುಮತದಿಂದ ಅನುಮೋದಿಸಿತು.

| ಕ್ರಮ ಸಂಖ್ಯೆ | ವೃಂದದ ಪದನಾಮ | ಈಗ ಬರುವ ಶ್ರೇಣಿ/ ವೇತನ ಶ್ರೇಣಿ | ನೂತನ ಎಐಸಿಟಿಇ ವೇತನ ಶ್ರೇಣಿ | |
|---|---|---|---|---|
| | | | ಹೊಸ ವೇತನ ಶ್ರೇಣಿ ಬ್ಯಾಂಡ್ ರೂ. | ಅಕಾಡೆಮಿಕ್ ಗ್ರೇಡ್ ವೇತನ ರೂ |
| 1 | ಪ್ರಾಧ್ಯಾಪಕರು, ನಿರ್ದೇಶಕರು ಮತ್ತು ಪ್ರಾಂಶುಪಾಲರು | 18,400-22,400 | 37,400-67,000 | 10,000 |
| 2 | ಸಹ ಪ್ರಾಧ್ಯಾಪಕರು | 16,400-20,000 | 37,400-67,000 | 9,000 |
| 3 | ಸಹಾಯಕ ಪ್ರಾಧ್ಯಾಪಕರು | 12,000-18,300 | 15,600-39,100 | 8,000 |
| 4 | ಉಪನ್ಯಾಸಕರು ಹಾಗು ಸೀನಿಯರ್ ರೆಸಿಡೆಂಟ್ ಮತ್ತು ಪರ್ಮನೆಂಟ್ ಟ್ಯೂಟರ್ | 8,000-13,500 | 15,600-39,100 | 6,000 |

**ವಿಷಯ ಸೂಚಿ ಸಂಖ್ಯೆ 4 : ಸಂಚಿತ ವೇತನದ ಮೇಲೆ ಕಾರ್ಯನಿರ್ವಹಿಸುತ್ತಿರುವ ಶ್ರೀ ವೆಂಕಟೇಶ್, ಆರ್ಥಿಕ ಸಲಹೆಗಾರರು ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಾಮವಳಿಯಂತೆ ಮೂಲ ವೇತನ (ರೂ. 20,025 -- 28,275) ವನ್ನು ರೂ. 10/-ನ್ನು ಕಡಿತಗೊಳಿಸಿ ವೇತನವನ್ನು ಪಾವತಿಸುವ ಬಗ್ಗೆ.**

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸಂಚಿತ ವೇತನದ ಮೇಲೆ ಆರ್ಥಿಕ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ವೆಂಕಟೇಶ್ ಇವರಿಗೆ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯಂತೆ ಅವರು ಕಾರ್ಯನಿರ್ವಹಿಸುತ್ತಿರುವ ಹುದ್ದೆಯ ಮೂಲ ವೇತನಕ್ಕೆ ರೂ. 10/-ಗಳನ್ನು ಕಡಿತಗೊಳಿಸಿ ದಿನಾಂಕ 02.06.2011ರಿಂದ ಅನ್ವಯವಾಗುವಂತೆ ವೇತನ ನಿಗದಿ ಪಡಿಸಿ ಪಾವತಿಸಲು ಆರ್ಥಿಕ ಸಮಿತಿ ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ ಸೂಚಿ ಸಂಖ್ಯೆ 05 : ಭಾರತೀಯ ವೈದ್ಯಕೀಯ ಮಂಡಳಿಯ ಅನುಮೋದನೆಗೆ ಅವಶ್ಯವಿರುವ ವಿವಿಧ ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಿ ಅರ್ಹತೆ ಮತ್ತು ಮೀಸಲಾತಿ ಅನ್ವಯ ಸಂದರ್ಶನದ ಮೂಲಕ ಆಯ್ಕೆ ಮಾಡಿದ್ದು, ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಫಲಿತಾಂಶ ಪಟ್ಟಿಯನ್ನು ಪ್ರಕಟಿಸಲು ಅನುಮತಿ ನೀಡುವ ಬಗ್ಗೆ.**

ಭಾರತೀಯ ವೈದ್ಯಕೀಯ ಮಂಡಳಿಯು 2011-12ನೇ ಸಾಲಿನ 4ನೇ ಹಂತದ ನವೀಕರಣದ ತಪಾಸಣಾ ವೇಳೆಯಲ್ಲಿ ಅರೆ ವೈದ್ಯಕೀಯ ಸಿಬ್ಬಂದಿಗಳ ಕೊರತೆಯಿರುವುದನ್ನು ಎತ್ತಿ ತೋರಿಸಿದ್ದು, ವಿವಿಧ ಬೋಧಕೇತರ ಸಿಬ್ಬಂದಿ ಹುದ್ದೆಗಳನ್ನು 2012-13ನೇ ಸಾಲಿನ ಭಾರತೀಯ ವೈದ್ಯಕೀಯ ಮಂಡಳಿಯ ಅಂತಿಮ ಅನುಮೋದನೆಗೋಸ್ಕರ ಭರ್ತಿ ಮಾಡುವುದು ಅತಿ ಅವಶ್ಯವಾಗಿರುವುದರಿಂದ ರಿಮ್ಸ್ ಕಾರ್ಯಾಲಯದ ಪತ್ರ ಸಂಖ್ಯೆ. ರಿಮ್ಸ್ / ನೇಮಕಾತಿ / ಸಿ(2) / 2009-10 ದಿನಾಂಕ 17.09.2009 & 0310.2009ರ ಪತ್ರಿಕಾ ಪ್ರಕಟಣೆಯಲ್ಲಿ ನೀಡಿರುವ ವಿವಿಧ ಬೋಧಕೇತರ ಸಿಬ್ಬಂದಿಯ ಹುದ್ದೆಗಳನ್ನು 3ನೇ ಸಿಬ್ಬಂದಿ ನೇಮಕಾತಿ ಸಭೆಯ ನಿರ್ಧಾರದಂತೆ 1:10ರ ಅನುಪಾತದಲ್ಲಿ ಅರ್ಹತೆ ಮತ್ತು ಮೀಸಲಾತಿಯನ್ವಯ ಸಂದರ್ಶನ ನಡೆಸಿ ಹಾಗು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರಿನಲ್ಲಿ ಸುಮಾರು ನಾಲ್ಕೈದು ವರ್ಷಗಳಿಂದ ಸಂಚಿತ ವೇತನದ ಮೇಲೆ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಸಿ ನೌಕರರಿಗೆ ಮೊದಲ ಆದ್ಯತೆಯನ್ನು ನೀಡಿ ನೇಮಕಾತಿಯಲ್ಲಿ ಪರಿಗಣಿಸಿರುವ ಬಗ್ಗೆ ಆರ್ಥಿಕ ಸಮಿತಿಯು ಪರಿಶೀಲಿಸಿ ಅನುಮೋದಿಸಿತು. ಹಾಗೂ ಆಡಳಿತ ಮಂಡಳಿಯ ಅನುಮೋದನೆ ಪಡೆದ ನಂತರ ಅಂತರ್‌ಜಾಲದಲ್ಲಿ ಫಲಿತಾಂಶದ ಪಟ್ಟಿಯನ್ನು ಪ್ರಕಟಿಸಲು ಆರ್ಥಿಕ ಸಮಿತಿ ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ ಸೂಚಿ ಸಂಖ್ಯೆ 6 : ದಿನಾಂಕ 16.01.2012ರಂದು ಜರುಗಿದ ರಿಮ್ಸ್ ಸಂಸ್ಥೆಯ ಖರೀದಿ ಸಮಿತಿ ಸಭೆಯ ಸಭಾ ನಡುವಳಿಗಳನ್ನು ಅನುಮೋದಿಸುವ ಬಗ್ಗೆ**

ಭಾರತೀಯ ವೈದ್ಯಕೀಯ ಮಂಡಳಿಯ ಅಂತಿಮ ಅನುಮೋದನೆ ಪಡೆಯಲು ಅವಶ್ಯವಿರುವ (1) Colour Doppler USG Equipment with 4 Probe Combination, (2) Whole Body 16 Slice Spiral C.T Scan and (3) Erection & Commissioning of Medical Gas Pipeline System ಉಪಕರಣಗಳನ್ನು ಹಾಗು ರಿಮ್ಸ್ ನೂತನ ಬೋಧಕ ಆಸ್ಪತ್ರೆಗೆ ಗ್ಯಾಸ್ ಪೈಪ್‌ಲೈನನ್ನು ಅಳವಡಿಸಲು ದಿನಾಂಕ 16.01.2012ರಂದು ಸರ್ಕಾರದ ಉಪ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರ ಉಪಸ್ಥಿತಿಯಲ್ಲಿ ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಖರೀದಿ ಸಮಿತಿ ಸಭೆಯ ಸಭಾ ನಡುವಳಿಗಳನ್ನು ಆರ್ಥಿಕ ಸಮಿತಿಯು ಅನುಮೋದಿಸಿ Erection & Commissioning of Medical Gas Pipeline System ಟೆಂಡರ್‌ದಾರರೊಂದಿಗೆ ಇನ್ನೊಮ್ಮೆ ದರಗಳನ್ನು ಕಡಿಮೆ ಮಾಡುವ ಬಗ್ಗೆ ಸಮಾಲೋಚಿಸಿ ಒಡಂಬಡಿಕೆಯನ್ನು ಮಾಡುವ ಷರತ್ತಿನೊಂದಿಗೆ ಅನುಮೋದಿಸಿತು.

ವಿಷಯ ಸೂಚಿ ಸಂಖ್ಯೆ 7 : ರಿಮ್ಸ್ ಬೋಧಕ ಆಸ್ಪತ್ರೆಯ ಲೆಕ್ಕ ಶಿರ್ಷಿಕೆ 2210 ಯೋಜನೇತರ ಖಾತೆಯಲ್ಲಿ 2010--11 & 2011-12ನೇ ಸಾಲಿನಲ್ಲಿ ಉಳಿತಾಯವಾಗಿರುವ ಅನುದಾನವನ್ನು ಲೆಕ್ಕ ಶಿರ್ಷಿಕೆ 2210 ಯೋಜನಾ ಖಾತೆಗೆ ವರ್ಗಾಯಿಸುವ ಬಗ್ಗೆ

ಯೋಜನಾ ಅನುದಾನದಿಂದ ವೇತನ ಪಾವತಿಸುವುದಕ್ಕೆ ಅನುದಾನದ ಕೊರತೆ ಉಂಟಾದ ಕಾರಣ ವರ್ಗಾವಣೆಯನ್ನು ಅನಿವಾರ್ಯವಾಗಿ ಅನುಮೋದಿಸಿತು.

**ವಿಷಯ ಸೂಚಿ ಸಂಖ್ಯೆ 8 : ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರ ವಿಷಯಗಳು**

1) **ರಿಮ್ಸ್ ಸಂಸ್ಥೆಯಲ್ಲಿ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 76 ಗ್ರೂಪ್ ಡಿ ನೌಕರರಿಗೆ ಹುದ್ದೆಯ ಮೂಲ ವೇತನಕ್ಕೆ ರೂ. 100/--ನ್ನು ಕಡಿತಗೊಳಿಸಿ ದಿನಾಂಕ 01.01.2012ರಿಂದ ಜಾರಿಯಾಗುವಂತೆ ಪಾವತಿಸಲು ಅನುಮತಿ ನೀಡುವ ಬಗ್ಗೆ.**

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಳೆದ ನಾಲ್ಕು ವರ್ಷಗಳಿಂದ ಸಂಚಿತ ವೇತನದ ಮೇಲೆ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 76 ವಿವಿಧ ಗ್ರೂಪ್ ಡಿ ನೌಕರರಿಗೆ ಅವರು ಕಾರ್ಯನಿರ್ವಹಿಸುತ್ತಿರುವ ಹುದ್ದೆಯ ಮೂಲ ವೇತನದಲ್ಲಿ ರೂ. 100/--ಗಳನ್ನು ಕಡಿತಗೊಳಿಸಿ ದಿನಾಂಕ 01.01.2012ರಿಂದ ಅನ್ವಯವಾಗುವಂತೆ ವೇತನ ನಿಗದಿ ಪಡಿಸಿ ಪಾವತಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದಿಸಲಾಯಿತು.

2) **ರಿಮ್ಸ್ ಆವರಣದಲ್ಲಿ ನಿರ್ಮಾಣವಾಗುತ್ತಿರುವ ನೂತನ 520 ಹಾಸಿಗೆಗಳ ಬೋಧಕ ಆಸ್ಪತ್ರೆಗೆ ಪೀಠೋಪಕರಣಗಳನ್ನು ಖರೀದಿಸಲು ಅನುಮತಿ ನೀಡುವ ಬಗ್ಗೆ**

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನೂತನ 520 ಹಾಸಿಗೆಗಳ ಬೋಧಕ ಆಸ್ಪತ್ರೆಗೆ ಬೇಕಾಗುವ ಪೀಠೋಪಕರಣಗಳನ್ನು ಖರೀದಿಸುವ ಪ್ರಸ್ತಾವನೆಯನ್ನು ಖರೀದಿ ಸಮಿತಿಯಲ್ಲಿ ಮಂಡಿಸಿ ಖರೀದಿ ಸಮಿತಿಯ ಅನುಮೋದನೆಯ ನಂತರ ಮುಂದಿನ ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಲು ಸೂಚಿಸಿತು.

ಸಭೆಯು ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು.

(ಕೆ.ಹೆಚ್ ಗೋಪಾಲಕೃಷ್ಣಗೌಡ)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು